ತಿಳಿದಿದ್ದು ತನ್ನದೇ ನೋವಾಗುವ ಪರಿಯನ್ನು ಅವರು ಅನುಭವಿಸಿದರು. ಬೇರೆ ಬೇರೆ ಪ್ರಮಾಣದಲ್ಲಿ ನಾವೆಲ್ಲರೂ ಇದನ್ನು ಅನುಭವಿಸಿದವರೇ. ಈ ನೋವಿಗೆ ಅಧ್ಯಾತ್ಮವೂ ಸೇರಿದಂತೆ ಎಲ್ಲಿಯೂ ಉತ್ತರವಿಲ್ಲವೆನ್ನುವುದೂ ಅವರಿಗೆ ಗೊತ್ತು. ಅಂತಹ ಅನುಭಾವಿಕ ಹುಡುಕಾಟದಲ್ಲಿ ಅವರಿಗೆ ನಂಬಿಕೆಯೂ ಇರಲಿಲ್ಲ. ತಾನು ಉಂಡ ಮತ್ತು ಕಂಡ ಸಂಗತಿಗಳಾಚೆ ಇದೆಯೆಂದು ಹೇಳಲಾಗುವ ಸಂಗತಿಗಳು ಅವರಿಗೆ ಬೇಡವಾಗಿತ್ತು. ವಿ.ಕೃ. ಗೋಕಾಕ, ಕುರ್ತಕೋಟಿ ಮುಂತಾದ ವಿಮರ್ಶಕರು ಇದನ್ನೇ ಕೊರತೆಯೆನ್ನುವಂತೆ ಹೇಳಿದ್ದಾರೆ! ಆದರೆ, ಅವರುಗಳು ಚಿತ್ತಾಲರ ಕಾವ್ಯವನ್ನು ಬೇರೆ ಕಾರಣಗಳಿಗಾಗಿ ಮೆಚ್ಚಿದ್ದಾರೆ. ಅನಂತಮೂರ್ತಿಯವರು ಸ್ವತಃ ತಾವೇ ರೂಪಿಸಿದ ನವ್ಯದ ಕಾವ್ಯಮೀಮಾಂಸೆಯನ್ನು ಪ್ರಶ್ನಿಸುವಷ್ಟು ಪ್ರಬಲವಾಗಿರುವ ಚಿತ್ತಾಲರ ಕಾವ್ಯದ ಬಗ್ಗೆ ಪ್ರೀತಿ ಮತ್ತು ಒಳನೋಟಗಳೊಂದಿಗೆ ಬರೆದಿದ್ದಾರೆ. ಚಿತ್ತಾಲರ 'ಹರಿವ ನೀರಿದು', 'ಸಂಪರ್ಕ' ಮತ್ತು 'ಹಾಲು' ಕವಿತೆಗಳು ಅವರ ಲೋಕಮೀಮಾಂಸೆ, ಜೀವನ ಮೀಮಾಂಸೆ ಮತ್ತು ಕಾವ್ಯಮೀಮಾಂಸೆಗಳನ್ನು ಪರೋಕ್ಷವಾಗಿ ಧ್ವನಿಸುತ್ತವೆ. ಗೆಳೆಯರಾದ ಕಿ.ರಂ. ನಾಗರಾಜ ಅವರು ಹೇಳಿರುವಂತೆ, 'ಬೇರೆಲ್ಲ ಸಂಘರ್ಷಗಳಿಗಿಂತ ವ್ಯಕ್ತಿ ಎದುರಿಸುವ ಸಂಘರ್ಷವೇ ಪ್ರಧಾನ. ತನ್ನ ಅಂತರಂಗದ ಸಂಘರ್ಷವನ್ನು ತನ್ನ ಕಾಲದ ಸಂಸ್ಕೃತಿಯ ಸಂಘರ್ಷವನ್ನಾಗಿಸುವ ಬಗೆ ಇಲ್ಲಿನ ಕವನಗಳ ಮುಖ್ಯ ವಿಧಾನ.' ಅದು ಸಂಸ್ಕೃತಿ ಮಾತ್ರವಲ್ಲ, ಮನುಷ್ಯ ಮತ್ತು ಪ್ರವೃತ್ತಿಗಳ ನಡುವಿನ ನಿರಂತರ ಸಂಘರ್ಷಕ್ಕೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವೂ ಹೌದು.

ಇಲ್ಲಿ
ಕಾಲಾತೀತದಲ್ಲಿ
ಕಾಲಾಧೀನರಾಗಿ ಚರಿಸುವುದೊಂದೆ
ಬೆರಗಿನರ್ಭಕ ದೃಷ್ಟಿ ಚಾಚಿ ಅಭ್ಯಾಗತರ ತೆರದಿ
ನೆಲಸುವುದೊಂದೆ
ನಶ್ವರತೆಯನೆ ಫಲಿಸಿ ಕುಡಿಯೊಡೆಯಬಿಟ್ಟು
ಶಾಶ್ವತಿಯ ನಿಲಿಸುವುದೊಂದೆ.
ಈ ಮಹಾದ್ಭುತದಿ ಉದ್ಭವಿಸಿ ಬಂದಿಹೆವಲ್ಲ
ಅದೆ ಒಂದು ಹಿಗ್ಗು, ಎಚ್ಚತ್ತು ನಿಂತಿಹೆವಲ್ಲ
ಅದೆ ಒಂದು ನೆತ್ತರಲಿ ದಿನರಾತ್ರಿ ಹರಿವ ಸುಖ

**(ಪುಟ 127)**

'ಹರಿವ ನೀರಿದು' ಕವಿತೆಯಲ್ಲಿಯೇ ಕಾಣಿಸಿಕೊಂಡ ಈ ಧೀರ ನಿಲುವು/ಪರಿಹಾರ, ತೀವ್ರವಾದ ವೈಯಕ್ತಿಕ ಯಾತನೆಯ ನಂತರವೂ ಕುಂದಲಿಲ್ಲವೆಂಬ ಸಂಗತಿಯನ್ನು 'ಸಂಪರ್ಕ' ಸಂಕಲನದ ಕವಿತೆಗಳನ್ನು ಓದಿದ ಪ್ರತಿಯೊಬ್ಬರೂ ಒಪ್ಪಿಕೊಂಡಿದ್ದಾರೆ. 'ಹರಿವ ನೀರಿದು' ಸಂಕಲನದ ಕವಿತೆಗಳವರೆಗೆ ಇದ್ದ ಸಾವಧಾನವು, ಸ್ವಂತನೋವು ಅಸಹನೀಯವೆನಿಸುವಷ್ಟು ತೀವ್ರವಾದಾಗ, ದೇಹದ ಕೈಮೇಲಾಗುತ್ತದೆ. ಗೆದ್ದು ನಿಲ್ಲುವೆನೆನ್ನುವ ಆತ್ಮವಿಶ್ವಾಸ ಕುಗ್ಗುತ್ತದೆ. ಹತಾಶೆ, ಭಯ, ಅಸಹಾಯಕತೆ ಮತ್ತು 'ನಿರುತ್ತರ' ಪ್ರಶ್ನೆಗಳು ಆವರಿಸಿಬಿಡುತ್ತವೆ. ಕವಿಯ ದನಿಯಲ್ಲಿ ಹರಿದಾಸರ ಆರ್ತತೆಯು ಕಾಣಿಸುತ್ತದೆ. ಆದರೆ, ಅವರಿಗಿದ್ದ ನಂಬಿಕೆಯ ಊರುಗೋಲು ಇವರಿಗಿಲ್ಲ. ಬದಲಾಗಿ ಇವರ ಚೇತನವು ಪುಟ್ಟ ಹುಡುಗಿ ಸವಿತೆ, ಹಳೆಯ ಗೆಳೆಯ ಗುಲ್ಮೊಹರ್ ಮುಂತಾದ ಮುಂದುವರಿಕೆಗಳಲ್ಲಿ ಸಮಾಧಾನ ಕಂಡುಕೊಳ್ಳುತ್ತದೆ. ಇದು ಕುಸಿಯುತ್ತಿರುವ ದೇಹವೆಂಬ ಘಟಸರ್ಪದ ಸೆರೆಯೊಳಗಿರುವ ಜೀವವು ಕಂಡುಕೊಳ್ಳುವ ಬಿಡುಗಡೆ.

ಇಲ್ಲಿರುವ ಧೀರತೆಯು ಸ್ವಂತಕ್ಕೆ ಸಂಬಂಧಿಸಿದ್ದಲ್ಲ. ಈ ಕವಿಯು ದೇಹದ (ಅಸ್ತಿತ್ವದ) ಅವನತಿ ಮತ್ತು ನಿರ್ಗಮನಗಳನ್ನು ಸಹಜವಾಗಿ ಒಪ್ಪಿಕೊಂಡಿದ್ದಾರೆ. ಸಾವಿಗೆ ಹೆದರದ ಈ ಕವಿ ನೋವಿನ ವಿಶ್ವರೂಪಕ್ಕೆ ಹೆದರಿದ್ದಾರೆ. ಆದರೆ, ಕವಿತೆಯ ಶಾಶ್ವತತೆಯಲ್ಲಿ ನಂಬಿಕೆ ಹಾಗೆಯೇ ಉಳಿದಿದೆ. ಬೀದಿಬದಿಯ ಧೂಳು ತುಂಬಿ ನೀರು ಹನಿಸಿದ ಡಬ್ಬಿಯಲ್ಲಿಯೂ ಮೊಳಕೆ ಒಡೆಯುತ್ತದೆ. ನೊಂದ ದೇಹದಿಂದಲೂ ಕವಿತೆ ಚಿಗಿಯುತ್ತದೆ. 'ಹಾಲಿನ ಹೊಳೆ' ಹರಿಯಲು ಮನುಷ್ಯನ ಕ್ರೌರ್ಯವು ಅಡ್ಡಿಯೇ ವಿನಾ ಪ್ರಕೃತಿಯಲ್ಲ. ಈ ಸಂಕಲನದ ಕಟ್ಟ ಕಡೆಯ ಕವನವಾದ 'ಕೃಷಿ', ಜೀವನಕ್ಕೂ ಕವಿತೆಗೂ ಅನ್ವಯಿಸುತ್ತದೆ.

ನಿಂತನಿಂತಲ್ಲೆ ಗೊತ್ತಾಯ್ತು